# ಕೃಷ್ಣಮೂರ್ತಿ ಹನೂರು



ಜಾನಪದ ತಜ್ಞ, ಕತೆಗಾರ, ಕಾದಂಬರಿಕಾರ ಕೃಷ್ಣಮೂರ್ತಿ ಹನೂರು ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡಿ ಸಂದರ್ಶಕ ಪ್ರಾಧ್ಯಾಪಕರಾಗಿದ್ದಾರೆ. 40ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಅವರ 'ಅಜ್ಞಾತನೊಬ್ಬನ ಆತ್ಮಚರಿತ್ರೆ' ಕಾದಂಬರಿ ಓದುಗರ ಮೇರೆಯಿಲ್ಲದ ಮೆಚ್ಚುಗೆ ಪಡೆದಿದೆ. ಅದೀಗ ಇಂಗ್ಲಿಷ್‌ಗೆ ಅನುವಾದಗೊಂಡು ಪ್ರಕಟವಾಗಿದೆ.

'ಕೇರಿಗೆ ಬಂದ ಹೋರಿ', 'ಕತ್ತಲಲ್ಲಿ ಕಂಡ ಮುಖ' ಮತ್ತು 'ಕಳೆದ ಮಂಗಳವಾರ ಮುಸ್ಸಂಜೆ' ಅವರ ಕಥಾಸಂಕಲನಗಳು. 'ಬಾರೋ ಗೀಜಗನೆ', 'ನಿಕ್ಷೇಪ' ಅವರ ಕಾದಂಬರಿಗಳು. ಜಾನಪದಕ್ಕೆ ಸಂಬಂಧಿಸಿದಂತೆ ಹಲವಾರು ಕೃತಿಗಳನ್ನು ಸಂಪಾದಿಸಿದ್ದಾರೆ. ಅವರು ಸಂಪಾದಿಸಿದ ವಿಶ್ವಕೋಶ 'ಎನ್‌ಸೈಕ್ಲೋಪಿಡಿಯಾ ಆಫ್ ಫೋಕ್‌ಕಲ್ಚರ್ ಆಫ್ ಕರ್ನಾಟಕ' ಕನ್ನಡ ಜಾನಪದವನ್ನು ಇಂಗ್ಲಿಷ್‌ನಲ್ಲಿ ಪರಿಚಯಿಸುತ್ತದೆ. ಇದನ್ನು ಹನೂರು ಚೆನ್ನೈನಲ್ಲಿ ನಾಲ್ಕು ವರ್ಷ ಇದ್ದು ಸಂಪಾದಿಸಿದ್ದಾರೆ. ಇದನ್ನು ಚೆನ್ನೈನ 'ಇನ್‌ಸ್ಟಿಟ್ಯೂಟ್ ಆಫ್ ಏಷ್ಯನ್ ಸ್ಟಡೀಸ್' ಪ್ರಕಟಿಸಿದೆ. ಅವರ ಪಿಎಚ್.ಡಿ. ಮಹಾಪ್ರಬಂಧ 'ಮ್ಯಾಸ ಬೇಡರು' ಬುಡಕಟ್ಟು ಅಧ್ಯಯನದ ಪುಸ್ತಕ ಇಂಗ್ಲಿಷ್‌ಗೆ ಭಾಷಾಂತರವಾಗಿದ್ದು, ಕುಪ್ಪಂನ ದ್ರಾವಿಡ ವಿಶ್ವವಿದ್ಯಾಲಯ ಪ್ರಕಟಿಸಿದೆ. ಹನೂರರು ಶಾಸನ, ಹಳಗನ್ನಡ ಮತ್ತು ಜಾನಪದ ಅಧ್ಯಯನಗಳ ಕೊಂಡಿಯಂತಿದ್ದಾರೆ. ಅವರ ಇತ್ತೀಚಿನ ಕೃತಿ 'ಕಾಲುದಾರಿಯ ಕಥನಗಳು'.

ಬೀದಿಯಲ್ಲೆಲ್ಲ ದಟ್ಟಯಿಸಿಕೊಂಡು ಬಿದ್ದಿದ್ದ ಅಮಾವಾಸ್ಯೆಯ ಕತ್ತಲನ್ನು, ಆಯಾ ಮನೆಯ ಬಾಗಿಲಿಂದೀಚೆಗೆ ತೂರಿಬರುತ್ತಿದ್ದ ಬುಡ್ಡಿ ದೀವಿಗೆಯ ಬೆಳಕಿನ ಸೆಳಕುಗಳು ಚುಚ್ಚಿ ಏಳಿಸಲು ನೋಡುತ್ತಿದ್ದವು. ಹಾಗಾದರೂ ಜಗ್ಗದೇ ಬಿದ್ದಿದ್ದ ಕಾವಳಿಗೆ ಕಣ್ಣು ಹೊಂದಿಸಿ ಮುಂದಾದೆ. ಗುಡಿಯಿಂದ ರವಷ್ಟು ಈಚೆಗಿದ್ದ ಜಗಲಿಕಟ್ಟೆ, ದೈತ್ಯಾಕಾರದ ಅರಳಿಮರ ಅಸ್ಪಷ್ಟವಾಗಿ ಕಾಣಿಸಿತು. ಮರದ ಕೊಂಬೆಗೆ ನೇತು ಹಾಕಿದ ಲಾಟೀನೊಂದು ಮಿಣಮಿಣ ಅನ್ನುತ್ತಿದ್ದು ರಾಕ್ಷಸನೊಬ್ಬ ಒಕ್ಕಣ್ಣು ಬಿಟ್ಟು ಕೂತಿದ್ದಂತೆ ಭಾಸವಾಯಿತು. ಸುತ್ತಲೂ ಜನ. ಕಟ್ಟೆಯ ಮಧ್ಯೆ ಗ್ರಾಮದ ಹಿರಿಯರು, ದೊಡ್ಡತಮ್ಮಯ್ಯ ಗುಡಿಯ ಪೂಜಾರಯ್ಯ ಕೂತಿದ್ದರು. ಇವರ ಆಜುಬಾಜಿಗೆ ಅಂದಾನಯ್ಯ, ಕುಂಟ ರಂಗಪ್ಪ ಇತ್ಯಾದಿಯಾಗಿ ಊರ ದೈವದವರೆಲ್ಲ ತಂತಮ್ಮ ದೇಹಭಾರಕ್ಕನುಸಾರವಾದ ಭಂಗಿಯಲ್ಲಿದ್ದರು. ಕಟ್ಟೆಯ ಕೆಳಗೆ ಹೆಣ್ಣು ಮಗಳೊಬ್ಬಳು ಉಂಡೆಯಾಗಿ ಮುದುರಿ ಕೂತಿದ್ದು, ಮುಖಕ್ಕೆ ಸೆರಗು ಮುಚ್ಚಿ ಅಳುತ್ತಿದ್ದಂತೆ ಕಂಡಿತು.